| Roll No. | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 63 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 24

Total No. of Questions : 63 ] [ Total No. of Printed Pages : 24

**ಸಂಕೇತ ಸಂಖ್ಯೆ : 01-K** **ವಿಷಯ : ಪ್ರಥಮ ಭಾಷೆ — ಕನ್ನಡ**

**Code No. : 01-K** **Subject : First Language — KANNADA**

ದಿನಾಂಕ : 28. 03. 2014 ] [ Date : 28. 03. 2014

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ] [ Time : 9-30 A.M. to 12-45 P.M.

ಪರಮಾವಧಿ ಅಂಕಗಳು : 125 ] [ Max. Marks : 125

**FOR OFFICE USE ONLY**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|
| 1. | | 14. | | 27. | | 40. | | 53. | |
| 2. | | 15. | | 28. | | 41. | | 54. | |
| 3. | | 16. | | 29. | | 42. | | 55. | |
| 4. | | 17. | | 30. | | 43. | | 56. | |
| 5. | | 18. | | 31. | | 44. | | 57. | |
| 6. | | 19. | | 32. | | 45. | | 58. | |
| 7. | | 20. | | 33. | | 46. | | 59. | |
| 8. | | 21. | | 34. | | 47. | | 60. | |
| 9. | | 22. | | 35. | | 48. | | 61. | |
| 10. | | 23. | | 36. | | 49. | | 62. | |
| 11. | | 24. | | 37. | | 50. | | 63. | |
| 12. | | 25. | | 38. | | 51. | | × | |
| 13. | | 26. | | 39. | | 52. | | × | |
| | | | | | | | | ***Total Marks*** | |

| **Total Marks in words** | | **Grand Total** | |
|---|---|---|---|

| | | | |
|---|---|---|---|
| 1. ✓ | | ✓ | ✓ |
| 2. ✓ | | | |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರುಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 63 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಗೆ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಗಳ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಸೀಸದ ಕಡ್ಡಿ (ಪೆನ್ಸಿಲ್) ಯಿಂದ ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು-ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ :

$15 \times 1 = 15$

1. ಇವುಗಳಲ್ಲಿ ಅನುನಾಸಿಕಾಕ್ಷರಗಳಿಂದ ಕೂಡಿದ ಪದ

(ಎ) ಬಸವ (ಬಿ) ನಮನ

(ಸಿ) ಕಳಸ (ಡಿ) ಸರಸ

*ಉತ್ತರ :* ______________________________

2. 'ಶಿವಣ್ಣನು ಕುವೆಂಪು ಶಾಲೆಯ ವಿದ್ಯಾರ್ಥಿ' – ಈ ವಾಕ್ಯದಲ್ಲಿರುವ ಅನ್ವರ್ಥನಾಮ ಪದ

(ಎ) ಶಿವಣ್ಣ (ಬಿ) ಕುವೆಂಪು

(ಸಿ) ವಿದ್ಯಾರ್ಥಿ (ಡಿ) ಶಾಲೆ

*ಉತ್ತರ :* ______________________________

3. ಇದು ಆತ್ಮಾರ್ಥಕ ಸರ್ವನಾಮಕ್ಕೆ ಉದಾಹರಣೆಯಾದ ಪದ

(ಎ) ಅವನು (ಬಿ) ನಾನು

(ಸಿ) ಯಾವನು (ಡಿ) ತಾನು

ಉತ್ತರ : ________________

4. 'ಜಯವಾಗಲಿ' ಪದವು ಈ ಕ್ರಿಯಾರೂಪಕ್ಕೆ ಉದಾಹರಣೆಯಾಗಿದೆ

(ಎ) ವಿಧ್ಯರ್ಥಕ (ಬಿ) ಸಂಭಾವನಾರ್ಥಕ

(ಸಿ) ನಿಷೇಧಾರ್ಥಕ (ಡಿ) ಕಾಲಾರ್ಥಕ

ಉತ್ತರ : ________________

5. 'ಸಕ್ಕದಮಂ' ಪದದಲ್ಲಿ ಬಂದಿರುವ ವಿಭಕ್ತಿಯ ಹೆಸರು

(ಎ) ಪ್ರಥಮ (ಬಿ) ದ್ವಿತೀಯ

(ಸಿ) ತೃತೀಯ (ಡಿ) ಚತುರ್ಥಿ

ಉತ್ತರ : ________________

6. 'ಕಡೆಗೋಲು' ಪದದಲ್ಲಿ ಆಗಿರುವ ಸಂಧಿ

(ಎ) ಲೋಪ (ಬಿ) ಆಗಮ

(ಸಿ) ಆದೇಶ (ಡಿ) ಪ್ರಕೃತಿ ಭಾವ

ಉತ್ತರ : ________________

7. ಈ ಪದವು ಜಶ್ತ್ವ ಸಂಧಿಗೆ ಉದಾಹರಣೆಯಾಗಿದೆ

(ಎ) ಮಹೋಪಕಾರ (ಬಿ) ಆಪದ್ಬಂದು

(ಸಿ) ಲೋಕಾಪವಾದ (ಡಿ) ಏಕೈಕ

ಉತ್ತರ : ________________

8. 'ಅಪ್ಪುದರಿಂ' ಪದದ ಹೊಸಗನ್ನಡ ರೂಪ

(ಎ) ಅಪ್ಪುವಿನಿಂದ (ಬಿ) ಅಪ್ಪುವುದರಿಂದ

(ಸಿ) ಅವರಿಂದ (ಡಿ) ಆದುದರಿಂದ

*ಉತ್ತರ :* ______________________

9. 'ಉಷ್ಕಾರ' ಪದದ ಗ್ರಾಂಥಿಕ ರೂಪ

(ಎ) ಉಪ್ಪುಖಾರ (ಬಿ) ಉಪಕಾರ

(ಸಿ) ಉಪ್ಪುಕಾರ (ಡಿ) ಉಪ್ಪಾರ

*ಉತ್ತರ :* ______________________

10. 'ವಯೋವೃದ್ಧ' ಪದವು ಈ ಸಮಾಸಕ್ಕೆ ಉದಾಹರಣೆ

(ಎ) ತತ್ಪುರುಷ (ಬಿ) ಕರ್ಮಧಾರಯ

(ಸಿ) ಬಹುವ್ರೀಹಿ (ಡಿ) ಗಮಕ

*ಉತ್ತರ :* ______________________

11. ಅಪಾರ ಶಕ್ತಿಯನ್ನು ಒಳಗಡೆ ಇರಿಸಿಕೊಂಡು ಗುಲಾಮರಂತೆ ವರ್ತಿಸಲು ಕಾರಣವೇನು – ಈ ವಾಕ್ಯದ ಕೊನೆಯಲ್ಲಿ ಇರಬೇಕಾದ ಲೇಖನ ಚಿಹ್ನೆ

(ಎ) ಪೂರ್ಣವಿರಾಮ (ಬಿ) ಭಾವ ಸೂಚಕ

(ಸಿ) ಅಲ್ಪವಿರಾಮ (ಡಿ) ಪ್ರಶ್ನಾರ್ಥಕ

*ಉತ್ತರ :* ______________________

12. ಅಂದು ಮಹಾರಾಜ ಕಾಲೇಜು 'ಸಂಸ್ಕೃತಿ ಮತ್ತು ಜ್ಞಾನದ' ದೇಗುಲದಂತಿತ್ತು. – ಈ ವಾಕ್ಯವು

(ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ

(ಸಿ) ಮಿಶ್ರ ವಾಕ್ಯ (ಡಿ) ಪ್ರಶ್ನಾರ್ಥಕ ವಾಕ್ಯ

*ಉತ್ತರ :* ______________________

13. 'ಕಂಠೀರವ' ಪದದ ಅರ್ಥ

(ಎ) ಕಂಠ (ಬಿ) ಹುಲಿ

(ಸಿ) ಕಂಠಿಹಾರ (ಡಿ) ಸಿಂಹ

ಉತ್ತರ : ______

14. 'ನಿತ್ಯ ಅನ್ನದಾನ ಇರಲು ಭಯವು ಏತಕೆ' – ಈ ವಾಕ್ಯದಲ್ಲಿರುವ ಕೃದಂತಾವ್ಯಯ ಪದ

(ಎ) ನಿತ್ಯ (ಬಿ) ಅನ್ನದಾನ

(ಸಿ) ಇರಲು (ಡಿ) ಏತಕೆ

ಉತ್ತರ : ______

15. 'ಲಂಚಗುಳಿ' ಪದವು ಈ ವಾಕ್ಯರಣಾಂಶಕ್ಕೆ ಉದಾಹರಣೆ

(ಎ) ತದ್ಧಿತಾಂತ ನಾಮ (ಬಿ) ತದ್ಧಿತಾಂತ ಭಾವನಾಮ

(ಸಿ) ತದ್ಧಿತಾಂತ ಅವ್ಯಯ (ಡಿ) ಕೃದಂತ ನಾಮ

ಉತ್ತರ : ______

16. ಈ ಕೆಳಗಿನ 'ಅ' ಪಟ್ಟಿಯಲ್ಲಿರುವ ವ್ಯಾಕರಣಾಂಶಗಳಿಗೆ ಸರಿಹೊಂದುವ ಉದಾಹರಣೆಗಳನ್ನು 'ಬ' ಪಟ್ಟಿಯಿಂದ ಆರಿಸಿ, ಕ್ರಮಾಕ್ಷರದೊಂದಿಗೆ ಉತ್ತರಕ್ಕೆ ಮೀಸಲಿಟ್ಟ ಜಾಗದಲ್ಲಿಯೇ ಬರೆಯಿರಿ : $5 \times 1 = 5$

| *ಅ ಪಟ್ಟಿ* | | *ಬ ಪಟ್ಟಿ* | |
|---|---|---|---|
| i) | ತದ್ಭವ | ಅ) | ಬೆನಕನ ಮದುವೆ |
| ii) | ಪರ್ಷಿಯನ್ | ಆ) | ಹೊಚ್ಚ ಹೊಸ |
| iii) | ಅನುಕರಣಾವ್ಯಯ | ಇ) | ಏಳುಬೀಳು |
| iv) | ದ್ವಿರುಕ್ತಿ | ಈ) | ಮತ್ಸರ |
| v) | ನುಡಿಗಟ್ಟು | ಉ) | ಧಗಧಗ |
| | | ಊ) | ಮುಸಾಫರ್ |
| | | ಋ) | ಮಚ್ಚರ |
| | | ಎ) | ಜಂಗಾಲು |

ಉತ್ತರ : i) ______

ii) ______

iii) ______

iv) ______

v) ______

ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : 5 × 1 = 5

17. ಪಾಠಕಾಲದಲ್ಲಿ ........................................................................ ಒಳಕ್ಕೆ ಬರಕೂಡದು.

18. ನಿಯಮ ಪಾಲನೆಯಲ್ಲಿ ........................................................................ ಇರಬೇಕು.

19. ಪಾಟಲೀಪುರದಲ್ಲಿ ಪಶುಲೋಮನ ಪರಮ ಮಿತ್ರನಾದ ........................................................ನೆಂಬ ವರ್ತಕನಿದ್ದನು.

20. ಜನ್ಮಭೂಮಿಯ ಮೀರಿದ ........................................................................ ಇಲ್ಲ.

21. ಕೋಗಿಲೆಯಾಗಿ ಪುಟ್ಟುವುದು ................................................................ ವನವಾಸಿ ದೇಶದೊಳ್.

ಈ ಕೆಳಗಿನ ಪ್ರತಿ ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 10 × 1 = 10

22. ಸುಪ್ರಸಿದ್ಧ ನಾಟಕಕಾರ ಶೆರಿಡನ್ ಯಾವ ಪಾರ್ಲಿಮೆಂಟಿನ ಸದಸ್ಯನಾಗಿದ್ದನು ?

23. ಅಂಗುಲೀಮಾಲನು 'ಮಂತ್ರ ವಿದ್ಯೆಯನರಿತ ಮಾಟಗಾರನೊ ನೀನು' ಎಂದು ಯಾರಿಗೆ ಹೇಳುತ್ತಾನೆ ?

24. ವೆಂಕಣ್ಣ ಮೇಷ್ಟ್ರು ಮಾಡಿದ ದೃಢ ಸಂಕಲ್ಪವೇನು ?

25. ಶಕ್ತಿಯ ಬಗೆಗೆ ಪುರಂದರದಾಸರು ಏನು ಹೇಳಿದ್ದಾರೆ ?

26. ಭಾರತೀಯ ಸೇನಾ ವ್ಯವಸ್ಥೆಯ ಮಹಾದಂಡನಾಯಕರಾಗಿ ಯಾರು ಕಾರ್ಯ ನಿರ್ವಹಿಸುತ್ತಾರೆ ?

27. ಜನಪದರು ಬೆಳಗಾಗಿ ಎದ್ದು ಯಾರನ್ನು ನೆನೆಯುತ್ತಾರೆ ?

28. ಮಾರರಿಪು ಹುಬ್ಬಿನ ಕೊನೆ ಸನ್ನೆ ಮಾಡುವುದರಿಂದ ಅರ್ಜುನನ ಶೌರ್ಯವನ್ನು ಯಾರಿಗೆ ತೋರಿಸಿದನು ?

29. ಶಿವ ಅರ್ಜುನನನ್ನು ಪರೀಕ್ಷಿಸಲು ಯಾವ ವೇಷದಲ್ಲಿ ಬಂದನು ?

30. ದುರ್ಯೋಧನನು ಮೂರನೆಯ ಹೊಡೆತವನ್ನು ಭೀಮನಿಗೆ ಯಾವ ಕಾರಣಕ್ಕಾಗಿ ಹೊಡೆದನು ?

31. 'ಕನ್ನಡನಾಡು ಎಲ್ಲಿಂದ ಎಲ್ಲಿಯವರೆಗೆ ಹಬ್ಬಿತ್ತು' ಎಂದು ಕವಿರಾಜಮಾರ್ಗಕಾರ ಹೇಳಿದ್ದಾನೆ ?

ಈ ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $15 \times 2 = 30$

32. ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆಯ ಲಕ್ಷಣಗಳೇನು ?

33. ಆಂಗ್ಲಭಾಷೆ ವಿಶ್ವವ್ಯಾಪಿಯಾಗಲು ಕಾರಣವೇನು ?

34. ನಗೆಯ ಅನಂತಕೊಂಡಿಗಳು ಯಾವುವು ?

35. ಅಳು-ನಗು ಎರಡೂ ಪರಸ್ಪರ ವಿರುದ್ಧವಾದುವು ಹೇಗೆ ?

36. ಸಿದ್ದೇಗೌಡರಿಗೆ ರಾಚಪ್ಪ ಕೋಪದಲ್ಲಿ ಏನು ಮಾಡಿದನು ?

37. ಕೆಂಪನು "ಗೌರಿಯನ್ನು ಸಂತೆಯಲ್ಲಿ ಮಾರೋಣ" ಎಂದು ಹೇಳಿದಾಗ ಸಿದ್ದೇಗೌಡರು ಕೋಪದಲ್ಲಿ ಏನೆಂದು ಅಬ್ಬರಿಸಿದರು ?

38. ಹೆಡ್‌ಮೇಷ್ಟ್ರು ವೆಂಕಟಸುಬ್ಬಯ್ಯನವರು ವೆಂಕಣ್ಣ ಮೇಷ್ಟ್ರಿಗೆ ಮಾಡಿದ ಸಹಾಯವೇನು ?

39. ಪುರಾಣ ಕೂಪದ ಸ್ವಚ್ಛ ಜಲದಲ್ಲಿ ತನ್ನ ಪ್ರತಿಬಿಂಬವನ್ನು ಕಂಡು ಉತ್ಸಾಹದಿಂದ ಮೊಲವು ಹೇಳಿದ ಮಾತುಗಳೇನು ?

40. ನರನು ಸರ್ವಜ್ಞನಾಗಲು ಏನನ್ನು ಮಾಡಬೇಕು ಎಂದು ಪುಲಿಗೆರೆ ಸೋಮನಾಥನು ಹೇಳಿದ್ದಾನೆ ?

41. ನಗುನಗುತ ಬಾಳಲು ನಾವು ಏನು ಮಾಡಬೇಕು ಎಂದು ಕವಿ ಡಿ.ವಿ. ಗುಂಡಪ್ಪನವರು ಹೇಳುತ್ತಾರೆ ?

42. ಆಕಾಶ, ಶಕ್ರ, ಗೋವು, ಸತ್ಯ – ಇವುಗಳ ಶ್ರೇಷ್ಠತೆಯನ್ನು ಧರ್ಮಜನು ಹೇಗೆ ಪ್ರತಿಪಾದಿಸಿದ್ದಾನೆ ?

43. ಕ್ಷತ್ರಿಯ, ಮಹಾಪುರುಷ, ಧೀಮಂತ ಹಾಗೂ ಪರೋಪಕಾರಿಗಳ ಗುಣವಿಶೇಷಗಳೇನೆಂದು ಧರ್ಮಜನು ಯಕ್ಷನಿಗೆ ಹೇಳುತ್ತಾನೆ ?

44. 'ಜಯ ಭಾರತ ಪುತ್ರ' ಪದ್ಯದಲ್ಲಿ ಭಾರತದ ಪ್ರಾದೇಶಿಕ ವಿಭಿನ್ನತೆಯನ್ನು ಹೇಗೆ ವರ್ಣಿಸಲಾಗಿದೆ ?

45. ಕವಿ ಸೇಡಿಯಾಪು ಕೃಷ್ಣಭಟ್ಟರು ಯಾರು ಯಾರನ್ನು ಭಾರತವೆಂಬ ಬೋಧಿ ವೃಕ್ಷದ ಕೊಂಬೆಗಳೆಂದು ಹೇಳಿದ್ದಾರೆ ?

46. ಅರ್ಜುನನು ಶಬರನಿಗೆ ಯಾರಲ್ಲಿ ನಿನ್ನ ಶೌರ್ಯವನ್ನು ತೋರಿಸು ಎಂದು ಹೇಳಿದನು ?

ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯವನ್ನು ಬರೆಯಿರಿ : 5 × 3 = 15

47. ''ಶಕ್ತಿ ಸೌಭಾಗ್ಯ ಚಿರಜೀವನದ ಒಳಗುಟ್ಟು''

48. ''ಲೋಕಾಪವಾದಕ್ಕೆ ಅಂಜದೆ ನಡೆದವನಲ್ಲ''

49. ''ಕೋಪಾತುರನಪ್ಪನಾವನುಂ ಬಟ್ಟಪನೆ''

50. ''ಬಂಗಾರ ಮೋರೆ ತೊಳೆದೇನ''

51. ‘‘ನೀರೊಳಗಿರ್ದುಂ ಬೆಮರ್ತನುರಗ ಪತಾಕಂ.’’

ಈ ಕವಿಗಳ / ಸಾಹಿತಿಗಳ ಕಾಲ, ಸ್ಥಳ ಹಾಗೂ ಒಂದು ಕೃತಿಯನ್ನು ತಿಳಿಸಿ, ವಾಕ್ಯರೂಪದಲ್ಲಿ ಉತ್ತರ ಬರೆಯಿರಿ : 2 × 3 = 6

52. ಪ್ರಭುಶಂಕರ

53. ಪಂಪ

54. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : 1 × 3 = 3

ಎಂದವನುಕ್ತಿಯಂ ಗಿರಿಶನಾಲಿಸಿ ತಾಪಸ ಲೇಸನಾಡಿದಯ್

55. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಗುರುತಿಸಿ, ಲಕ್ಷಣದೊಂದಿಗೆ ಸಮನ್ವಯಗೊಳಿಸಿ ಬರೆಯಿರಿ : 1 × 3 = 3

ನಿನ್ನ ಕರುಣೆ ಕಡೆಗೋಲಿಟ್ಟು ಮಥಿಸುತಿಹೆ ಏಕೆ ?

56. ಈ ಕೆಳಗಿನವುಗಳಲ್ಲಿ ಯಾವುದಾದರೂ **ಒಂದು** ಗಾದೆಯನ್ನು ವಿಸ್ತರಿಸಿ ಬರೆಯಿರಿ : 1 × 3 = 3

— ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು

— ಅರಮನೆಗಿಂತ ನೆರೆಮನೆಲೇಸು

— ಮಾತು ಬೆಳ್ಳಿ, ಮೌನ ಬಂಗಾರ

57. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : 1 × 4 = 4

ನುಡಿಯಲು ____________________

____________________

____________________

____________________

ಎಂಬೆನು ಅಜಗಣ್ಣ ತಂದೆ.

**ಅಥವಾ**

ಹಲ್ಲಣವಿಲ್ಲದೆ ಕುದುರೆ ಹತ್ತಿ ಓಡಿಸಿದಂತೆ

____________________

____________________

____________________

ಎಲ್ಲ ಸಾಧನೆಗಳ ಮಾಡಲೇನು.

58. ಈ ಕೆಳಗಿನ ಪದ್ಯಭಾಗದ ಸಾರಾಂಶವನ್ನು ಬರೆಯಿರಿ : 1 × 4 = 4

ಸನ್ನೆಯರಿತು ನಡೆಯದಂಥ ಸತಿಯಿದ್ದೇತಕೆ
ಭಿನ್ನವರಿತು ನಡೆಯದಂಥ ಸ್ನೇಹವೇತಕೆ
ಮುನ್ನಕೊಟ್ಟು ಹುಟ್ಟಲಿಲ್ಲ ಬಯಸಲೇತಕೆ
ಚೆನ್ನ ಆದಿಕೇಶವನಿರಲು ದೈವವೇತಕೆ.

59. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 × 4 = 8

— ವಿಧಾನಸೌಧ ನಿರ್ಮಾಣದ ಹಿನ್ನೆಲೆಯನ್ನು ಸಂಕ್ಷಿಪ್ತವಾಗಿ ವಿವರಿಸಿ ಬರೆಯಿರಿ.
— ಗುರುಬಚ್ಚನ್ ಸಿಂಗ್‌ನ ಸಾಹಸವನ್ನು ಕುರಿತು ಬರೆಯಿರಿ.
— ಕನ್ನಡ ಭಾಷೆ ಸಮೃದ್ಧವಾಗಿ ರೂಪುಗೊಂಡ ಬಗೆ ಹೇಗೆ ? ವಿವರಿಸಿ.

60.

61. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಒಂದು** ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $1 \times 4 = 4$

— 'ಮಾತೃಭೂಮಿ' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

— ಕಪ್ಪೆ ಅರಭಟ್ಟನ ಶಾಸನ ಹಾಗೂ ಲಕ್ಷ್ಮೀಧರಾಮಾತ್ಯನ ಶಾಸನಗಳಲ್ಲಿ ಕನ್ನಡ ಸಂಸ್ಕೃತಿ ಹೇಗೆ ವ್ಯಕ್ತವಾಗಿದೆ ?

62. — ನಿಮ್ಮನ್ನು ಮೈಸೂರು ನಗರದ ಮಹಾರಾಜ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಥವನೇಶ' ಎಂದು ಭಾವಿಸಿಕೊಂಡು, ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ಕುರಿತು ಮೈಸೂರು ಜಿಲ್ಲೆ, ಹೆಗ್ಗಡ ದೇವನಕೋಟೆಯಲ್ಲಿ ವಾಸವಾಗಿರುವ ನಿಮ್ಮ ತಂದೆಯಾದ ಗಿರೀಶ ಎಂಬುವವರಿಗೆ ಪತ್ರ ಬರೆಯಿರಿ. $1 \times 5 = 5$

**ಅಥವಾ**

— ನಿಮ್ಮ ಚಾಮರಾಜನಗರ ಜಿಲ್ಲೆ ಉಡೀಗಾಲ ಗ್ರಾಮದ ಜೆ.ಎಸ್.ಎಸ್. ಪ್ರೌಢಶಾಲೆಯ ವಿದ್ಯಾರ್ಥಿ 'ಸಂಕಲ್ಪ' ಎಂದು ಭಾವಿಸಿಕೊಂಡು, ನಿಮ್ಮ ಗ್ರಾಮದ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವಂತೆ ಕೋರಿ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಿಗೆ ಮನವಿ ಪತ್ರ ಬರೆಯಿರಿ.

63. ಕೆಳಗಿನ ವಿಷಯಗಳಲ್ಲಿ ಯಾವುದಾದರೂ **ಒಂದಕ್ಕೆ** ಹದಿನೈದು ಸಾಲುಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ : 1 × 5 = 5

— ಶಾಲೆಗಳಲ್ಲಿ ಅಕ್ಷರ ದಾಸೋಹ ಮತ್ತು ಕ್ಷೀರಭಾಗ್ಯ ಯೋಜನೆಯ ಮಹತ್ವ

— ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ 'ಮಕ್ಕಳ ಹಕ್ಕು ಕಾಯ್ದೆ' - 2009

— ರಾಷ್ಟ್ರೀಯ ಹಬ್ಬಗಳ ಆಚರಣೆಯ ಮಹತ್ವ